ಒಂಥರಾ ಅವನಿಗೆ ಅವನದೇ ಆದ ಪ್ರತಿಷ್ಠೆಯಿದೆ. ವರ್ಚಸ್ಸು ಇದೆ. ಚಾರ್ಮ್ ಇದೆ. ಅವತ್ತು ಮೊದಲಬಾರಿ ಅವನನ್ನು ಭೇಟಿಯಾಗಿದ್ದೆ. ಅವತ್ತೂ ಕೋಟು ಸೂಟಿನಲ್ಲಿದ್ದ. ಅವನ ವೃತ್ತಿ ಜೀವನದಲ್ಲಿ ಪ್ರತಿದಿನವೂ ಸೂಟ್‌ನಲ್ಲೇ ಇರ್ತಾನೆ. ಫೇಸ್‌ಬುಕ್ ಫೋಟೋಗಳಲ್ಲಿ ಮಾತ್ರ ಅವನನ್ನು ಬರ್ಮುಡಾ, ಟೀಶರ್ಟಿನಲ್ಲಿ ತಲೆ ಕೆದರಿಕೊಂಡು ನಿಂತದ್ದನ್ನು ನೋಡಬಹುದಿತ್ತು.

ಆ ವಿಷಯ ಈ ವಿಷಯ ಮಾತಾಡಿ ಒಂದು ಕಾಫಿ ಕುಡಿದು ಅವನೇ ಮನೆವರೆಗೆ ಡ್ರಾಪ್ ಮಾಡಿ ಹೋಗಿದ್ದ. ಆಮೇಲೆ ಒಮ್ಮೆ ಮನೆ ಹತ್ತಿರದ ಕಾಫಿ ಡೇ ನಲ್ಲಿ ಕೂತು ಕಾಫಿ ಕುಡಿದಿದ್ದೆ. ಅಲ್ಲಿವರೆಗೂ ಅವನು ಎಂಥಹ ವ್ಯಕ್ತಿ, ಸ್ವಭಾವ ಎಂಥದ್ದು, ಅವನ ಹಾಬಿಗಳೇನು, ಅವನ ಮನಸಿನಲ್ಲೇನಿದೆ ಮತ್ತು ನಾನು ಯಾಕೆ ಭೇಟಿಯಾದೆ ಎಂಬುದು ಗೊತ್ತಿಲ್ಲ. ಭೇಟಿಯಾದುದಕ್ಕೆ ಆಕರ್ಷಿತಳಾದೆ ಅಂತಲೂ ಇಲ್ಲ. ಸುಮ್ಮನೆ ಒಂದು ಸ್ನೇಹ ಇದ್ದುಕೊಳ್ಳಲಿ ಬಿಡು ಅನ್ನುತ್ತೇವಲ್ಲ ಹಾಗೆ. ಆಕರ್ಷಣೆ ಇಲ್ಲವೆಂದರೂ ಹಾಗಂತ ಅಲ್ಲಗಳೆದುಬಿಡುವ ವ್ಯಕ್ತಿಯೂ ಅಲ್ಲ. ಅವನ ನೋಟ ಚಾಕುವಿಗಿಂತ ಹರಿತವಿದೆ. ಎದುರಿನ ವ್ಯಕ್ತಿಯನ್ನು ಆ ನೋಟ ಸೀಳಿಕೊಂಡು ಒಳಗಿನದನ್ನು ಜಾಲಾಡಿಬಿಡಬಹುದು. ವ್ಯಕ್ತಿಗಳನ್ನು ಪೂರ್ತಿಯಾಗಿ ಅಳೆದು ತೂಕವಾಗಿ ಮಾತಾಡುತ್ತಾನೆ – ಸ್ವಲ್ಪವೂ ಅತಿರೇಕವೆನಿಸದಂತೆ. ಬೇಕೆಂದರೆ ಇನ್ನಿಲ್ಲದಷ್ಟು ಡಿಸೇಂಟ್ ಆಗಿಬಿಡುತ್ತಾನೆ. ಸ್ವಲ್ಪ ಮಾತಾಡುವ ಸಲುಗೆ ಕೊಟ್ಟರೆ ಸಿಕ್ಕಾಪಟ್ಟೆ ಪೋಲಿಯೂ ಆಗಿಬಿಡುತ್ತಾನೆ... ಹೀಗೆ ಅವನೊಂದು ಭಯ ಮಿಶ್ರಿತ ವಿಸ್ಮಯ ನನಗೆ, ಯಾವಾಗಲೂ...

ಆದರೆ, ಜಿಮ್ಮಿ ಯಾವಾಗಲೂ ಹೆಚ್ಚಾಗಿ ಮಾತಾಡಿದ್ದು ತನ್ನ ಗೆಳತಿಯರು... ತನ್ನ 'ಐ ಡೋಂಟ್ ಕೇರ್' ಎನ್ನುವ ಬದುಕು. ತನ್ನ ಗುರುತು ಪರಿಚಯದ ನಗರದ ಪ್ರತಿಷ್ಠಿತ ಹೆಂಗಸರು, ಅವರ ಕೀರ್ತಿ, ಐಷಾರಾಮಿ ಜೀವನ, ಅವರ ಸಣ್ಣತನ, ಎಂತೆಥವರು ಒನ್ ನೈಟ್ ಸ್ಟೇಗೆಲ್ಲ ಸಿಕ್ಕಿಬಿಡುತ್ತಾರೆನ್ನುವುದನ್ನು ಯಾವ ಭಾವನೆಗಳೂ ಇಲ್ಲದೇ, ಈಗಿನ ಸಮಾಜದಲ್ಲಿ ಹೀಗಿದೆ ಅದೇನು ಹೊಸತಲ್ಲ ಅನ್ನುವಂತೆ ಹೇಳುತ್ತಿದ್ದ. ಈ ಜಗತ್ತಿನ ರಹಸ್ಯಗಳನ್ನು ನನಗಾಗಿಯೇ ಬಿಚ್ಚಿಡುತ್ತಿದ್ದಾನೆಯೋ ಎನಿಸಿ ಬೆರಗಿನಲ್ಲಿ ನಾನು ಕೇಳಿಸಿಕೊಳ್ಳುತ್ತಿದ್ದರೂ ಒಳಗೊಳಗೆ ನೂರಾರು ಕತೆಗಳ ಪುಟಗಳು ಚಡಪಡಿಸುತ್ತಿದ್ದವು. ಇವನ ಮಾತುಗಳೇ ಒಂದೊಂದು ಕತೆಗಳು... ನಾನು ಬರಿದೆ ನಗುತ್ತಿದ್ದೆ ಅವನ ಮಾತು ಕೇಳಿಸಿಕೊಳ್ಳುತ್ತ...

'ಬದುಕೆನ್ನುವುದು ಬದುಕಲಿಕ್ಕೆ ಇರೋದು, ಬದುಕಿಬಿಡಬೇಕು ರಮ್ಯಾ, ಬದುಕನ್ನು ಯಾವತ್ತೂ ಸೀರಿಯಸ್ಸಾಗಿ ತೆಗೆದುಕೊಳ್ಳಬಾರದು. ಅದೂ ಐವತ್ತರ ಈ ವಯಸ್ಸಿನಲ್ಲಿ... ಅವನು ನಿಂಗೆ ಇಷ್ಟಾನಾ, ಆಯ್ತು ಹೋಗಿ ಹಲೋ ಅಂತಾದರೂ ಹೇಳು. ಮಾತಾಡ್ಬೇಕಾ ಮಾತಾಡು, ಇಲ್ಲಾ ಇನ್ನೂ ಬಿಡಿಸಿ ಹೇಳಬೇಕೆಂದರೆ – ಅವನೆಂದರೆ ಇಷ್ಟಾನಾ, ಮೋಹಾನಾ? ಅವನ ಜೊತೆ ಮಲಗಿಕೊಳ್ಳೊಬೇಕಾ, ಮಲಕ್ಕೊ. ಖುಶಿಪಡು ಆ ಕ್ಷಣಗಳನ್ನು ಪಡೆದದ್ದಕ್ಕೆ... ನಂತರ ನೆನಪಿನ ಕದ ಒದ್ದು ಹಾಕಿ ಎದ್ದು ಮುನ್ನಡೆಯಬೇಕು. ಇದಿಷ್ಟೇ ಬದುಕು...' ಎನ್ನುತ್ತಿದ್ದ ಜಿಮ್ಮಿ.

ಅಬ್ಬಾ ಜಿಮ್ಮಿ! ಇಷ್ಟು ಸಲೀಸಾಗಿ ಹೇಗೆಲ್ಲ ಮಾತಾಡುತ್ತಾನೆ. ಇವನು ಇಂಥವೇ ಕುತೂಹಲದ, ಪುಳಕದ ಮಾತುಗಳನ್ನು ಹೇಳುವಾಗೆಲ್ಲ ನನಗೆ ಗೊತ್ತೇ ಇಲ್ಲದ ಲೋಕವನ್ನು ಎಷ್ಟು ಚೆಂದ ಬಿಡಿಸಿ ಬಿಡಿಸಿ ತೋರಿಸುತ್ತಿದ್ದಾನೆಂದು ಖುಶಿಯಾಗಿಹೋಗಿದ್ದೆ. ಅದಕ್ಕೆ ಅವನ ಮಾತುಗಳಿಗೆ ಒಗ್ಗಿ ಹೋದೆ. ಏನಿಲ್ಲದಿದ್ದರೂ ಒಂದಿಷ್ಟು ಹೊಸ ಕಥೆಗೆ ಸಾಮಗ್ರಿಯಾದರೂ ಸಿಗಬಹುದೆನ್ನುವ ಆಸೆಯಿದ್ದೀತು ನನಗೆ.